

ಹೂವಿನ ಕೋಲು

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ 'ಚೆನ್ನುಡಿ' ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್–
**editorsu@sudha.co.in**

ನೆರವೇರುತ್ತದೆ. ಭಾವಪರವಶರಾಗಿ ನಾಗನ ಪಾತ್ರಿಗಳು ಕುಣಿಯುವುದನ್ನು ನೋಡುವುದೇ ಕಣ್ಣಿಗೆ ಹಬ್ಬ. ದೈವಾರಾಧನೆಯಲ್ಲಿ ಕೋಲ, ನೇಮ, ತಂಬಿಲ, ಅಗೆಲ್ ಮತ್ತು ಕೋಲ ಕಟ್ಟುವುದು ಮುಂತಾದ ವಿಧಿವಿಧಾನಗಳಿವೆ. ಪಂಜುರ್ಲಿ, ರಕ್ತೇಶ್ವರಿ, ಜಟ್ಟಿಗರಾಯ, ಕಲ್ಕುಡ, ಬೊಬ್ಬರ್ಯ ಹೀಗೆ ಹತ್ತು ಹಲವು ದೈವಗಳು ನಂಬಿದವರಿಗೆ ಒಳಿತನ್ನೇ ಮಾಡಿವೆ. ಈ ದೈವಗಳನ್ನು ನಂಬಿದವರು ವರ್ಷಕ್ಕೊಮ್ಮೆ ದೈವಪಾತ್ರಿಗಳ ಸಮ್ಮುಖದಲ್ಲಿ ಕೋಲ ಸೇವೆ ಒಪ್ಪಿಸುತ್ತಾರೆ.

ಕುಂದಾಪುರ ಎಂದರೆ ಥಟ್ಟನೆ ನೆನಪಾಗುವುದು ಯಕ್ಷಗಾನ. ಯಕ್ಷಗಾನ ಈ ನೆಲದ ಸಂಸ್ಕೃತಿಯ ಮತ್ತು ಪರಂಪರೆಯ ಪ್ರತೀಕ. ಈ ಕಲೆ ಕರಾವಳಿಯ ಜನರ ಜೀವಾಳ. ಹೂವಿನ ಕೋಲು, ತಾಳಮದ್ದಳೆ, ಕಂಬಳ ಮುಂತಾದ ಜಾನಪದೀಯ ಸಂಸ್ಕೃತಿ ಕೂಡ ಇಲ್ಲಿ ಆಚರಣೆಯಲ್ಲಿವೆ.

ಇಲ್ಲಿ ನಿಮಗೆ ಎಲ್ಲೆಂದರಲ್ಲಿ ಕಾಣಸಿಗುವುದು ಸಾಲು ಸಾಲು ತೆಂಗಿಮರಗಳು, ಅಡಿಕೆ ಮರಗಳು, ಬಾಳೆ ಗಿಡಗಳು ಮತ್ತು ನಾಡಹೆಂಚಿನ ಮನೆಗಳು. ಮೊದಲೆಲ್ಲ ಈ ಭಾಗದಲ್ಲಿ ಕಾಣಸಿಗುತ್ತಿದ್ದುದು ಹುಲ್ಲುಮಾಡಿನ ಮನೆ ಅಥವಾ ಹೆಂಚಿನ ಮನೆಗಳು. ಹೆಚ್ಚಿನ ಮನೆಗಳಲ್ಲಿ ಒಂದು ಚಾವಡಿ, ಪಡಸಾಲೆ, ಕೆಂಪು ಕಾವಿ ನೆಲ, ಒಂದೋ ಎರಡೋ ಕೋಣೆಗಳು, ದನಗಳನ್ನು ಕಟ್ಟಲು ಒಂದು ಹಟ್ಟಿ, ಚೊಕ್ಕವಾಗಿ ಸಗಣಿ ಸಾರಿಸಿದ ಅಂಗಳ, ಕೊಯ್ಲು ಮುಗಿದ ಮೇಲೆ ಮನೆಯ ಮುಂದೆ ರಾಶಿ ಮಾಡಿ ಕಟ್ಟಿಟ್ಟ ಸುಂದರ ಭತ್ತದ ತಿರಿ ಕಾಣಸಿಗುತ್ತವೆ. ಆಹಾ! ಇವನ್ನು ನೋಡಲು ಎರಡು ಕಣ್ಣುಗಳು ಸಾಲದು. ಇತ್ತೀಚೆಗೆ ಹೆಚ್ಚಿನವರು ತಮ್ಮ ಹಳೆಯ ಮನೆಗಳನ್ನು ಅಳಿದು ಕಾಂಕ್ರೀಟ್ ಮನೆಗಳ ಒಡೆಯರಾಗುತ್ತಿದ್ದಾರಾದರೂ ಈಗಲೂ ಕೆಲವು ಹೆಂಚಿನ ಮನೆಗಳು ತಮ್ಮ ಅಸ್ತಿತ್ವ ಉಳಿಸಿಕೊಂಡಿವೆ.

ನಾಡಿನೆಲ್ಲೆಡೆಯಿಂದ ಭಕ್ತರನ್ನು ಸೆಳೆಯುವ ಈ ಭಾಗದ ಪ್ರಮುಖ ದೇವಾಲಯಗಳೆಂದರೆ ಕುಂದಾಪುರದ ಕುಂದೇಶ್ವರ ದೇವಸ್ಥಾನ, ಬೈಂದೂರು ಸೇನೇಶ್ವರ ದೇವಸ್ಥಾನ, ಮರವಂತೆ ಶ್ರೀವರಾಹ ಸ್ವಾಮಿ ದೇವಸ್ಥಾನ, ಆನೆಗುಡ್ಡೆಯ ವಿನಾಯಕನ ದೇವಸ್ಥಾನ, ಕೋಟೇಶ್ವರದ ಕೋಟಿಲಿಂಗೇಶ್ವರ ದೇವಸ್ಥಾನ, ಕೋಟ ಅಮೃತೇಶ್ವರಿ ದೇವಸ್ಥಾನ, ಹಿರೇಮಹಾಲಿಂಗೇಶ್ವರ ದೇವಸ್ಥಾನ, ಸಾಲಿಗ್ರಾಮದ ಶ್ರೀಗುರುನರಸಿಂಹ ದೇವಸ್ಥಾನ, ಆಂಜನೇಯ ದೇವಸ್ಥಾನ. ಇದಲ್ಲದೆ ಇನ್ನೂ ಹಲವು ದೇಗುಲಗಳು ಈ ಭಾಗದಲ್ಲಿವೆ. ಇಲ್ಲಿರುವ ಅರಬ್ಬಿ ಸಮುದ್ರ ಮತ್ತು ಸೌಪರ್ಣಿಕಾ, ಸೀತಾ ಮುಂತಾದ ನದಿಗಳು ಪ್ರವಾಸಿಗರನ್ನು ಆಕರ್ಷಿಸುವುದಲ್ಲದೆ ಮತ್ಸ್ಯೋದ್ಯಮಕ್ಕೂ ದಾರಿ ಮಾಡಿಕೊಟ್ಟಿದೆ. ಇತ್ತೀಚಿಗೆ ಹಲವು ಕಡೆ ಬೀಚ್ ರೆಸಾರ್ಟ್ ಕೂಡ ತಲೆ ಎತ್ತಿ ಹೊಸತೊಂದು ಉದ್ಯಮಕ್ಕೆ ದಾರಿ ಮಾಡಿಕೊಟ್ಟಿದೆ.

ಕರಾವಳಿಯ ಖಾದ್ಯಗಳು ವಿಶ್ವಾದ್ಯಂತ ಪ್ರಸಿದ್ಧಿ ಪಡೆದಿವೆ. ಹಲಸಿನ ಕೊಟ್ಟೆ ಕಡುಬು, ಮುಂಡಕನ ಓಲಿ ಕಡುಬು, ಕಾಯಿಕಡುಬು, ನೀರ್ ದೋಸೆ, ಬಾಳೆಹಣ್ಣಿನ ಬನ್ಸ್, ಕೆಸುವಿನ ಎಲೆ ಪತ್ರೊಡೆ, ಹೀರೆಕಾಯಿ ಖಾರ ದೋಸೆ (ಹೀರೆಕಾಯಿ ಚಟ್ಟಿ), ಹಲಸಿನ ಹಣ್ಣಿನ ಖಾದ್ಯಗಳಾದ ಹಲಸಿನಗಟ್ಟಿ, ಪಾಯಸ, ಮುಳಕ, ದೋಸೆ ಹೀಗೆ ತರಹೇವಾರಿ ಖಾದ್ಯಗಳು ಜನರ ಜಿಹ್ವಾ ಚಾಪಲ್ಯವನ್ನು ತಣಿಸುತ್ತವೆ.

ಕೋಟ ಕುಂದಾಪುರ ಬದಿಯವರು ಶ್ರಮಜೀವಿಗಳು. ಒಂದು ಗಳಿಗೆ ಕೂತು ಸಮಯ ವ್ಯರ್ಥಮಾಡುವವರಲ್ಲ. ಒಂದೆರಡು ತೆಂಗಿನಹೆಡೆ ಬಿದ್ದರೆ ಅದರಿಂದ ತಮ್ಮ ಮನೆಗಾಗುವ ಪೊರಕೆಯನ್ನು ಅವರೇ ತಯಾರಿಸಿಕೊಳ್ಳುತ್ತಾರೆ. ಹಾಗೆ ಅದೇ ತೆಂಗಿನ ಹೆಡೆಗಳನ್ನು ನೆಯ್ದು ಚಾಪೆ (ಮಡ್ಲು) ತಯಾರಿಸಿ ಚಪ್ಪರಕ್ಕೆ ಬಳಸುತ್ತಾರೆ. ಬೇಸಿಗೆ ಬಂತೆಂದರೆ ಸಾಕು ಅಂಗಳದಲ್ಲಿ ಹಪ್ಪಳ ಸಂಡಿಗೆ ತಯಾರಿ ಭರದಿಂದ ಸಾಗುತ್ತದೆ. ಅಕ್ಕಿ ಹಪ್ಪಳ, ಹಲಸಿನ ಹಪ್ಪಳ, ಗೆಣಸಿನ ಹಪ್ಪಳ, ನಾನಾ ಬಗೆಯ ಸಂಡಿಗೆಗಳನ್ನು ಮಾಡಿ ಬಂಧುಬಳಗಕ್ಕೆ ಹಂಚುತ್ತಾರೆ. ಹಾಗೆ ಮಾವಿನಕಾಯಿ ಸೀಸನ್‌ನಲ್ಲಿ ಮಾವಿನಕಾಯಿ ಮಿಡಿ ಉಪ್ಪಿನಕಾಯಿ, ಹೋಳುಪ್ಪಿನಕಾಯಿ, ಮಾವಿನ ಹಿಂಡಿ ತಯಾರಿಸುತ್ತಾರೆ.

ಇಷ್ಟೆಲ್ಲ ವಿಶೇಷತೆಗಳಿರುವ ನಮ್ಮೂರನ್ನು ನೋಡಬೇಕೆಂಬ ಹಂಬಲವಾಗುತ್ತಿದೆಯೆ? ಹಾಗಾದರೆ ತಡವೇಕೆ?

'ಒಂದ್ಗಳಿಗಿ ಪುರ್ಸೊತ್ ಮಾಡ್ಕಂಡ್ ಬನಿಯೇ. ಊರ್ ಬದಿ ಎಲ್ಲ ಕಂಡ್ಕಂಡ್ ಆನೆಗುಡ್ಡೆ, ಸಾಲಿಗ್ರಾಮ ದೇವಸ್ಥಾನ ಎಲ್ಲ ಪೂರೈಸಿ ಅಲ್ಲೇ ಉಂಡ್ಕಂಡ್ ಬೈಸಾರಿಗ್ ಬೀಚ್ ಬದಿ ಹೋಯಿ ರಾತ್ರಿ ಕತ್ತಲಾಪೂಕು ನಿಮ್ಮೂರ್ ಬಸ್ ಹತ್ತಿನಿ ಅಕಾ'. ■

